ಶಿವಣ್ಣನ ಅಗಮನ ಇರುಸುಮುರುಸಾಗಿತ್ತು.

ಮೊದಲು ತಾನು ಮಾತ್ರ ಒಂಟಿಯಾಗಿ ಕಳೆಯುತ್ತಿದ್ದ ಈ ಜಾಗದಲ್ಲಿ ಜಂಪಯ್ಯನ ಆಗಮನವಾಗಿತ್ತು. ಹೇಗೋ ಅವನನ್ನು ಸಹಿಸಿಕೊಂಡು ಬಂದವನಿಗೆ ಈಗ ಅವನೊಡನೆ ಆತ್ಮೀಯತೆ ಬೆಳೆದಿತ್ತು. ಸಾಲದಕ್ಕೆ ಜಂಪಯ್ಯ ಅಲ್ಲೇ ಹಕ್ಕು ಸ್ಥಾಪಿಸಿಕೊಂಡು ನೆಲೆ ಕಂಡಿದ್ದ. ಈಗ ಮತ್ತೆ ಈ ಶಿವಣ್ಣ! ತಮಗೆ ಮಾತ್ರ ಸೀಮಿತವೆನಿಸಿದ್ದ ಪರಿಸರ ಈಗ ಹೊರ ಜಗತ್ತಿಗೆ ತೆರೆದುಕೊಳ್ಳುತ್ತಿದೆ ಮತ್ತು ತಮ್ಮ ಖಾಸಗಿತನಕ್ಕೆ ಧಕ್ಕೆಯುಂಟಾಗುತ್ತಿದೆ ಎನ್ನುವ ಭಾವನೆಯಿಂದ ಕಾಯಕನಾಥ ಬೇಸರಿಸಿಕೊಂಡ. ಆದರೆ ಜಂಪಯ್ಯನಿಗೆ ಅದರ ಪರಿವೆಯೇ ಇರಲಿಲ್ಲ. ದಾರಿಯಲ್ಲಿ ಬರುವಾಗ ಶಿವಣ್ಣನಿಗೆ ಎಲ್ಲಾ ತಿಳಿಸಿ ಹೇಳಿದ್ದರಿಂದ ಶಿವಣ್ಣನಿಗೂ ಅ ಪರಿಸರ ಇಷ್ಟವಾಗಿತ್ತು.

'ನೀನು ಹೇಳಿದಕ್ಕಿಂತ ಈ ಜಾಗ ಚೆನ್ನಾಗಿದೆ. ಹಿತವಾಗಿದೆ. ಸ್ವಲ್ಪ ಕಾಲ ಕಷ್ಟಪಟ್ಟರೆ ನಾವು ಇಲ್ಲೇ ಅರಣ್ಯ ಕೃಷಿ ಮಾಡಬಹುದು. ಕೃಷಿ ಇಲಾಖೆಯವರು ಆಗಾಗ ಕಾರಗದ್ದೆಗೆ ಬಂದಾಗ ಹೇಳ್ತಾನೇ ಇರ್ತಾರೆ ಒಂದೇ ಬೆಳೆ ಬೆಳೆದರೆ ಕಷ್ಟನಾವು ನೇರಳೆ, ಹೆಬ್ಬೇವು, ಪೇರಲ, ಸೀತಾಫಲ, ನಿಂಬೆ, ನುಗ್ಗೆ, ಟೊಮ್ಯಾಟೊ, ಮೆಣಸು, ಬೇವು, ನೆಲ್ಲಿ ಈ ಥರ ಹತ್ತಾರು ಗಿಡ ನೆಟ್ಟರೆ ಬೇಗ ಫಲ ಪಡೆಯಬಹುದು. ಇವಕ್ಕೆಲ್ಲಾ ಅಷ್ಟೊಂದು ನೀರಿನ ಅಗತ್ಯ ಇರುವುದಿಲ್ಲ...' ಜಂಪಯ್ಯನ ಮುಖ ಮೊರದಗಲವಾಗಿತ್ತು.

'ಇಲ್ಲಿ ಆ ಗಿಡ ನೆಟ್ಟರೆ ಆಗುತ್ತೆ ಅಂತೀಯಾ ಶಿವಣ್ಣ? ನೀನು ನನಗೆ ಸಹಾಯ ಮಾಡ್ತೀಯಾ? ನನಗೊಬ್ಬನೇ ಅದನ್ನು ನಿರ್ವಹಿಸಲು ಕಷ್ಟವಾಗುತ್ತೆ. ನೀನು ಇಲ್ಲೇ ಇದ್ದುಬಿಡು. ಜೊತೆಗ ಕೃಷಿ ಮಾಡೋಣ... ಎಷ್ಟು ಕಾಲ ಅಂತ ನೀನೂ ಆ ಅನಂತಣ್ಣನ ತೋಟದಲ್ಲಿ ಜೀತ ಮಾಡ್ತೀಯಾ? ಅಲ್ಲಿ ದುಡಿಯೋದನ್ನೇ ಇಲ್ಲಿ ದುಡಿದರೆ ಫಲ ನಮಗೇನೆ ಸಿಗುತ್ತೆ... ಯೋಚನೆ ಮಾಡು...'

ಇವರ ಮತು ಕೇಳಿ ಕಾಯಕನಾಥ ಕಹಿ ಉಂಡವನಂತೆ ಮುಖ ಮಾಡಿ ಎದ್ದು ನಡೆದ.

'ಇವನಿಗೇನಾಯಿತು...?' ಶಿವಣ್ಣ ಅವನೆಡೆಗೆ ವಿಚಿತ್ರವಾಗಿ ನೋಡಿದ.

'ಇಲ್ಲಿ ಯಾರಾದ್ರೂ ಬಂದರೆ ಅವನಿಗೆ ಇಷ್ಟ ಆಗಲ್ಲ ಅವನು ಒಂಟಿಯಾಗಿರಲು ಇಷ್ಟಪಡ್ತಾನೆ. ಅವನದ್ದು ದೊಡ್ಡ ಕತೆ. ಇನ್ನೊಮ್ಮೆ ಹೇಳುವೆ. ಈಗ ಬಂದ ಕೆಲಸದ ಬಗ್ಗೆ ಗಮನಕೊಡೋಣ. ಇಲ್ಲೇ ಒಂದು ಇಂಥ ಮನೆ ಕಟ್ಟು. ಇಲ್ಲಿ ಯಾರೂ ನಿನಗೆ ಹೇಳೋರಿಲ್ಲ, ಕೇಳೋರಿಲ್ಲ. ಕಾರಗದ್ದೆ ಸೇತುವೆ ತನಕ ಹೋದರೆ ಯಾವುದಾದರೂ ಗಾಡಿ ಸಿಗುತ್ತೆ. ಹೋಗಿ ಬರಬಹುದು ಏನಂತೀಯಾ...?'

ಜಂಪಯ್ಯನ ಪ್ರಸ್ತಾಪ ಶಿವಣ್ಣನಿಗೆ ಇಷ್ಟವಾಗಿತ್ತು. 'ನಾನು ಮನೇಲಿ ಒಂದು ಮಾತು ಕೇಳ್ತೀನಿ...' ಎಂದ. ಆ ದಿನ ಶಿವಣ್ಣ ಜಂಪಯ್ಯನ ಮನೆಯಲ್ಲೇ ಉಳಿದುಕೊಂಡ. ಕಾರಗದ್ದೆಯಲ್ಲಿ, ಜಂಪಯ್ಯ ಅಜ್ಜರಕಾಡು ಮನೆತನದ ಜಾಗದಲ್ಲಿ ಮನೆಕಟ್ಟಿ ಕುಳಿತಿರುವುದು ಈಗ ಸುದ್ದಿಯಾಗಿತ್ತು. ತಮ್ಮ ಕೆಲಸಕ್ಕೆ ಜಂಪಯ್ಯ ಸಿಗದಾಗ ಅರಸಿಕೊಂಡು ಬಂದವರಿಗೆ ಆಗಾಗ ಪ್ರತ್ಯಕ್ಷವಾಗಿ ಮರೆಯಾಗುವ ಜಂಪಯ್ಯನ ವಿಷಯ ಕಾರಗದ್ದೆಯಂಥ ಚಿಕ್ಕ ಊರಲ್ಲಿ ಹರಡಲು ಹೆಚ್ಚು ಹೊತ್ತು ಬೇಕಾಗಿರಲಿಲ್ಲ. ಕೆಲವರು ಏನೇನೋ ಆಡಿಕೊಂಡರು.

'ಅಲ್ಲಿ ಏನೂ ಸೌಲಭ್ಯಾನೇ ಇಲ್ಲ ಗಾಳಿ ತಿಂದು, ನೀರು ಕುಡಿದು ಬದುಕಬೇಕು. ಅಷ್ಟಕ್ಕೂ ಆ ಅಜ್ಜರಕಾಡು ಮನೆಯವರು ವಿದೇಶದಿಂದ ವಾಪಸ್ಸು ಬಂದು ಒಕ್ಕಲೆಬ್ಬಿಸಿದರೆ ಮತ್ತೆ ಅವನಿಗೆ ಕಾರಗದ್ದೆಯ ಯಾರದಾದರೂ ಮನೆಯೇ ಗತಿ...!'

ಕೆಲವರಿಗೆ ಕುತೂಹಲ, ಕೆಲವರಿಗೆ ತಾವೂ ಅಲ್ಲಿಗೆ ಬಂದು ನೆಲೆಸಬೇಕೆಂಬ ಆಸೆ. ಆದರೆ ಆ ಪರಿಸರ ಸ್ವಲ್ಪ ದೂರ, ಜೊತೆಗೆ ಆ ಜಾಗದ ವಾರಸುದಾರರು ಮರಳಿದರೆ ಪಟ್ಟ ಶ್ರಮ, ನೆಲೆಸಿದ ಸಮಯ ಎಲ್ಲವೂ ವ್ಯರ್ಥವೆಂಬ ಚಿಂತೆ.

ಶಿವಣ್ಣನ ಜೊತೆ ಜಂಪಯ್ಯ ರಾತ್ರಿಯಿಡೀ ಹರಟಿದ. ಕಾಯಕನಾಥ ಜಗುಲಿಯಲ್ಲಿ ಮಲಗಿದರೂ ಒಳಗೆ ಇವರ ಜೋರು ಮಾತುಕತೆಯಿಂದ ನಿದ್ರೆಗೆ ಭಂಗ ಬಂದಿತ್ತು. ಕುಶಲ ಮಾತುಗಾರನಾಗಿದ್ದ ಜಂಪಯ್ಯ ಕಡೆಗೂ ಶಿವಣ್ಣನ ಮನ ಬದಲಿಸಿ ಅಜ್ಜರಕಾಡಿಗೆ ಸೆಳೆಯುವಲ್ಲಿ ಯಶಸ್ವಿಯಾಗಿದ್ದ.

'ಇಬ್ರೂ ಮೈ ಮುರಿದು ಕೆಲಸ ಮಾಡೋಣ. ಕಷ್ಟಪಟ್ಟರೆ ಫಲಾನೂ ನಮಗೇನೆ ಅಲ್ವಾ? ನಿನಗೆ ತಲೆ ಇದೆ. ನನಗೆ ಬಲ ಇದೆ. ಗಿಡ ತಂದು ನೆಟ್ಟು ಆರೈಕೆ ಮಾಡೋಣ. ಅದು ಬೆಳೆದು ಫಲ ಸಿಗೋವರೆಗೂ ಮಾತ್ರ ಕಷ್ಟ. ಬೇಕಾದರೆ ಗಿಡ ನೆಟ್ಟು ಹೋಗು. ನಾನು ಆರೈಕೆ ಮಾಡ್ತೀನಿ. ಬೆಳೆ ಬಂದು ನಿನಗೆ ಭರವಸೆ ಬಂದರೆ ಆನಂತರ ಬೇಕಾದರೆ ಬಂದು ಇಲ್ಲೇ ನೆಲೆಸು.' ಶಿವಣ್ಣ ಹ್ಞೂಂ ಅನ್ನಲೇ ಬೇಕಾಯಿತು.

ಮರುದಿನ ಇವರ ಕೃಷಿಗೆ ಜಾಗ ನೋಡುವ ಕಾರ್ಯಕ್ರಮವೂ ಜರುಗಿತು. ಕಾಯಕನಾಥ ಅವರೊಡನೆ ಹೋಗಲಿಲ್ಲ. ಏಕೋ ಅಜ್ಜರಕಾಡಿನಲ್ಲಿ ಈ ಜಂಪಯ್ಯನ ಅತಿಕ್ರಮಣ ಬುದ್ಧಿಯಿಂದ ಏಕಾಂತಕ್ಕೆ, ನೆಮ್ಮದಿಗೆ ಭಂಗವುಂಟಾಗುತ್ತಿದೆ ಎನ್ನುವ ಕಸಿವಿಸಿ ಶುರುವಾಗಿತ್ತು. ಅದರೂ ಅವನೇನೂ ಮಾಡಲಾರದವನಾಗಿದ್ದ. ಜಂಪಯ್ಯ ಏನೇ ಹೇಳಿದರೂ ಕೇಳಿಸಿಕೊಳ್ಳುವವನಲ್ಲ, ಅವನ ಮನಸ್ಸಿಗೆಬಂದದ್ದನ್ನು ಮಾಡಿಯೇತೀರುವವನೆಂದು ಇಷ್ಟು ಸಮಯದ ಅವನ ಒಡನಾಟದಲ್ಲಿ ಕಾಯಕನಾಥ ಅರ್ಥಮಾಡಿಕೊಂಡಿದ್ದ. ಅವನ ಬಿಗು ಧೋರಣೆಯನ್ನೂ ಲೆಕ್ಕಿಸದೇ ಅವರಿಬ್ಬರೂ ತಮ್ಮದೇ ದೀರ್ಘ ಚರ್ಚೆಯಲ್ಲೇ ಮುಳುಗಿದ್ದರು. ಇಡೀ ಅಜ್ಜರಕಾಡಿನ ಸ್ವಲ್ಪ ತಗ್ಗಿನ ಪ್ರದೇಶದಲ್ಲಿ ಮಣ್ಣು ಸ್ವಲ್ಪ ಉಳಿದ ಜಾಗಕ್ಕಿಂತಲೂ ಮೆದುವಾಗಿದ್ದು, ಕೃಷಿಗೆ ಅದು ಸೂಕ್ತವೆಂದು ತೋರಿತ್ತು. ಶಿವಣ್ಣನಿಗೆ ಆಗಲೇ ಅವನು ಕೆಲಸ ಮಾಡುವ ಅನಂತಣ್ಣನ ತೋಟದಿಂದಲೂ, ಕೃಷಿ ಇಲಾಖೆಯ ಅಧಿಕಾರಿಗಳಿಂದ ಗಿಡಗಳನ್ನು ಪಡೆದು ಯಾವ ಬಂಡವಾಳವೂ ಹೂಡದೇ ಆರಂಭಿಸಬಹುದೆಂಬ ಉತ್ಸಾಹ ತೋರಿಸಿದಾಗ ಜಂಪಯ್ಯ ಗೆಲುವಾದ.

ಶಿವಣ್ಣ ಗಿಡಗಳೊಂದಿಗೆ ಬರುವುದಾಗಿ ತಿಳಿಸಿ ಹೊರಟುಹೋದ ಬಳಿಕ ಕಾಯಕನಾಥ ಅವನೊಂದಿಗೆ ವಾಗ್ವಾದಕ್ಕಿಳಿದ.

'ಏನು ಮಾಡ್ತಿದ್ದೀಯಾ? ಇಲ್ಲಿ ಬಂದ ಉದ್ದೇಶ ಏನು? ನೀನು ಮಾಡುತ್ತಿರುವುದೇನು? ನಿನ್ನ ಚಾಳಿ ತೋರಿಸಿಯೇ ಬಿಟ್ಟೆಯಲ್ಲಾ ನೀನು?' ಅಷ್ಟರವರೆಗೂ ಅವನ ಕೋಪ, ಬಿಗು ಮೌನ, ನೋಡಿ ಅರ್ಥ ಮಾಡಿಕೊಂಡಿದ್ದ ಜಂಪಯ್ಯ ಒಂದಿನಿತೂ ವಿಚಲಿತನಾಗಲಿಲ್ಲ.

'ನಿನ್ನ ಮಾತು, ವರ್ತನೆ ಅರ್ಥಹೀನ ಅನ್ನುತ್ತೆ ನನಗೆ. ಮನುಷ್ಯ ಅಂದ್ಮೇಲೆ, ಅವನು ಬದುಕಲು, ಜೀವನ ನಿರ್ವಹಣೆಗೆ ಏನು ಬೇಕೋ ಅದು ಮಾಡಿಕೊಳ್ಳಲೇಬೇಕು ತಾನೇ? ನೀನಂತೂ ಜೀವನವೇ ಬೇಡ ಅಂತ ನಿರ್ಧರಿಸಿ ಕಾಡಿಗೆ ಬಂದವನು. ನಿನಗೆ ಬದುಕು ಬೇಡ ಎನಿಸಿರಬಹುದು. ಆದರೆ ನನಗೆ ಹಾಗಲ್ವೇ? ನನ್ಗೆ ಬದುಕಬೇಕು ಕೊನೆ ಉಸಿರು ಇರುವವರೆಗೂ ಜೀವನವನ್ನು ಅದಮ್ಯವಾಗಿ ಪ್ರೀತಿಸಬೇಕು. ನನ್ನನ್ನು ನಾನು ಕ್ರಿಯಾಶೀಲನಾಗಿರಿಸಿಕೊಳ್ಳಬೇಕು. ಕೃಷಿ ನನಗೆ ಮುಂಚಿನಿಂದಲೂ ಪ್ರೀತಿಯ ಹವ್ಯಾಸ, ಪ್ರವೃತ್ತಿ. ಅದೇ ವೃತ್ತಿ ಆದರೆ ತಪ್ಪೇನಿದೆ? ಪ್ರಕೃತಿಯ ಪರಿಸರದಲ್ಲಿ ಅದನ್ನು ಬೆಳೆಸಿ ಉಳಿಸುವುದರಲ್ಲಿ ನನಗೆ ಖುಷಿ ಇದೆ. ಈ ಬರಡು ಭೂಮಿಯಲ್ಲಿ ಬೆಳೆ ತೆಗೆದರೆ ಹಸುರು ಬೆಳೆಸಿದಂತಾಗುವುದಿಲ್ಲವೇ? ನಾವು ಅದಕ್ಕಾಗಿ ಏನೂ ಹಾನಿಗೊಳಿಸುತ್ತಿಲ್ಲವಲ್ಲ? ಅಷ್ಟಕ್ಕೂ ಇಲ್ಲಿ ಈ ಜಾಗದ ಜನರೇ ಇದ್ದು ಅವರು ಈ ಜಾಗದಲ್ಲಿ ಏನಾದರೂ ರೂಢಿಸಿಕೊಂಡು ಬಂದಿದ್ದರೆ ನಾವು ಅದನ್ನು ಸ್ವೀಕರಿಸುತ್ತಿರಲಿಲ್ಲವೇ? ನಿನಗೆ ಸಮಸ್ಯೆ ಆಗಿರುವುದು ನಿಜವಾಗಲೂ ಯಾವುದು? ನನ್ನ ಅತಿಕ್ರಮಣವೋ ನಿನ್ನ ಏಕಾಂತಕ್ಕೆ ಭಂಗವಾಗಿದೆಯೆಂದೋ?'

ಕಾಯಕನಾಥ ಮಾತನಾಡಲಿಲ್ಲ. ಜಂಪಯ್ಯ ಅವನ ಅಂತರಂಗಕ್ಕೆ ಕನ್ನಡಿ ಹಿಡಿದಂತೆ ಮಾತನಾಡಿದ್ದ.

'ನೀನು ನಿನ್ನ ಮನಸ್ಥಿತಿಯನ್ನು ಬದಲಿಸಿಕೊಂಡರೆ ಎಲ್ಲವೂ ಹೊಸದಾಗಿಯೇ ಕಾಣುತ್ತದೆ. ಪ್ರತಿಯೊಂದು ಭಾವವೂ ನೋಡುಗನ ನೋಟದ ಮೇಲೆ ಅವಲಂಬಿಸಿರುತ್ತದೆ. ಬದುಕನ್ನು ಮತ್ತೆ ಪ್ರೀತಿಸಲು ಆರಂಭಿಸು. ಎಲ್ಲವೂ ಹೊಸದಾಗಿ ಕಾಣುತ್ತದೆ ನೋಡು. ಬದುಕೆಂದರೆ ಅಷ್ಟೇ ಹೊಸ ಹೊಸ ಸಾಧ್ಯತೆಗಳಿಗೆ ತೆರೆದುಕೊಳ್ಳುವುದು, ಸಂದಿಗ್ಧತೆಗಳಿಗೆ ಸಿಲುಕುವುದು, ಕನಸುಗಳಿಗೆ ಬರಮಾಡಿಕೊಳ್ಳುವುದು... ಇದಿಲ್ಲದಿದ್ದರೆ ಬದುಕು ನೀರಸ. ನಿನ್ನ ಮನಸ್ಸಿಗೆ ಹಾಕಿಕೊಂಡ ಮುಸುಕು ತೆರೆದರೆ ಇದೆಲ್ಲವೂ ನಿನಗೂ ಗೋಚರಿಸಲಾರಂಭಿಸುತ್ತದೆ. ಈಗ ನಾನು ಇಲ್ಲಿ ಬಂದು ಮನೆ ಕಟ್ತೇನೆ ಅನ್ನೋದು, ನೀನು ಇಲ್ಲಿ ಬಂದು ಸೇರೋದು... ಇಬ್ಬರಿಗೂ ಇದು ತಿಳಿದಿರಲಿಲ್ಲ ಅಲ್ವಾ...? ಕಾಲದ ಪುಟಗಳಲ್ಲಿ ಏನಿದೆ ಅನ್ನೋದು ಅನುಭವಿಸಿಯೇ ತೀರಬೇಕು..'

ಕಾಯಕನಾಥನಿಗೆ ಜಂಪಯ್ಯ ತನ್ನ ಮನಸ್ಸನ್ನು ಅರ್ಥ ಮಾಡಿಕೊಳ್ಳಲು ಶಕ್ತನಲ್ಲ ಎನಿಸಿ ಎದ್ದು ನಡೆದ.

(ಸಶೇಷ)